**ಕರ್ನಾಟಕ ಸರ್ಕಾರ**

ಸಂಖ್ಯೆ/ಭೂಉಕೋ/43/2005-06

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 14/11/2006

## ಸುತ್ತೋಲೆ

ವಿಷಯ:- ಭೂಮಿ- ಹಕ್ಕು ಬದಲಾವಣೆಗೆ ಸಂಬಂದಿಸಿದಂತೆ ಜಾರಿಯಲ್ಲಿರುವ ವಹಿವಾಟಿಗೆ ಆಕ್ಷೇಪಣೆ ಸಲ್ಲಿಸುವ ಬಗ್ಗೆ

*****

1966 ಭೂ ಕಂದಾಯ ನಿಯಮಗಳು ನಿಯಮ 66 ರ ಮೇರೆಗೆ ಹಕ್ಕುಬದಲಾವಣೆ ವಿಚಾರದಲ್ಲಿ ಜಾರಿಯಲ್ಲಿರುವ ವಹಿವಾಟಿಗೆ ಹಿತಾಸಕ್ತಿಯುಳ್ಳ ವ್ಯಕ್ತಿಯು ಹಕ್ಕುಬದಲಾವಣೆ ವರದಿಯನ್ನು ಪ್ರಚುರಪಡಿಸಿದ ದಿನಾಂಕದಿಂದ 30 ದಿನದೊಳಗಾಗಿ ತನ್ನ ಆಕ್ಷೇಪಣೆಯನ್ನು ಸಲ್ಲಿಸಬಹುದಾಗಿದೆ. ಭೂಹಕ್ಕುದಾಖಲೆಗಳನ್ನು ಗಣಕೀಕರಣಗೊಳಿಸಲಾಗಿರುವಂತೆ ಭೂಮಿ 4.5 ರ ಹೊಸ ತಂತ್ರಾಂಶದಲ್ಲಿ ಅಂತಹ ಆಕ್ಷೇಪಣೆಗಳನ್ನು ನಾಗರೀಕರು ಭೂಮಿ ಕೇಂದ್ರದ ಅರ್ಜಿ ಕಿಯಾಸ್ಕ್‌ನಲ್ಲಿ ಸಲ್ಲಿಸುವ ಸೌಲಭ್ಯವನ್ನು ಈಗ ಕಲ್ಪಿಸಲಾಗಿದೆ. ಅಲ್ಲದೇ ಭೂಮಿ ಅರ್ಜಿ ಕಿಯಾಸ್ಕ್ ಮೂಲಕ ಸ್ವೀಕರಿಸಿದ ಆಕ್ಷೇಪಣೆಗಳಿಗೆ ಕಂಪ್ಯೂಟರ್ ಮುದ್ರಿತ ಸ್ವೀಕೃತಿಯನ್ನು ನೀಡಲಾಗುತ್ತದೆ. ನಾಗರೀಕರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಸರ್ಕಾರವು ಈ ಸೌಲಭ್ಯವನ್ನು ಭೂಮಿ ಯೋಜನೆಯಲ್ಲಿ ಅಳವಡಿಸಿದೆ. ಆಕ್ಷೇಪಣೆಯನ್ನು ಸಲ್ಲಿಸುವುದಕ್ಕಾಗಿ ಗ್ರಾಮ ಲೆಕ್ಕಿಗರು ಅಥವಾ ಕಂದಾಯ ನಿರೀಕ್ಷಕರನ್ನು ಸಂಪರ್ಕಿಸುವ ಅವಶ್ಯವಿರುವುದಿಲ್ಲ. ನಿಗದಿತ ಅವಧಿಯೊಳಗೆ ಭೂಮಿ ಅರ್ಜಿ ಕಿಯಾಸ್ಕ್‌ನಲ್ಲಿ ಸಲ್ಲಿಸುವ ಲಿಖಿತ ಆಕ್ಷೇಪಣೆಗಳನ್ನು ಕಂಪ್ಯೂಟರ್‌ನಲ್ಲಿ ದಾಖಲಿಸಿ, ಅಂತಹ ಪ್ರಕರಣಗಳನ್ನು ವಿವಾದಾಸ್ಪದ ಪ್ರಕರಣಗಳ ಪಟ್ಟಿಗೆ ಸೇರಿಸಿ ಕಂದಾಯ ನಿರೀಕ್ಷಕರಿಗೆ ಮಾಹಿತಿಯನ್ನು, ಕೂಡಲೆ ಕಳುಹಿಸುವ ಮೂಲಕ ಮ್ಯುಟೇಷನ್ ಪ್ರಕ್ರಿಯೆಯನ್ನು ನಿಯಂತ್ರಿಸಲಾಗುವುದು. ಇದರಿಂದ ಭೂಮಿ ಯೋಜನೆ ನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ದಾಯಿತ್ವ ಇರುತ್ತದೆ.

ಆದುದರಿಂದ ಇನ್ನು ಮುಂದೆ ನಾಗರೀಕರು ಜಾರಿಯಲ್ಲಿರುವ ಮ್ಯುಟೇಷನ್ ವಹಿವಾಟಿಗೆ, ಆಕ್ಷೇಪಣೆಯನ್ನು ಭೂಮಿ ಅರ್ಜಿ ಕಿಯಾಸ್ಕ್ ಮೂಲಕ ಸಲ್ಲಿಸುವಂತೆ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ. ಅಲ್ಲದೆ ಎಲ್ಲಾ ತಹಸೀಲ್ದಾರರು ಇನ್ನು ಮುಂದೆ ಭೂಮಿ ಅರ್ಜಿ ಕಿಯಾಸ್ಕ್ ಮೂಲಕ ಆಕ್ಷೇಪಣೆಗಳನ್ನು ಸ್ವೀಕರಿಸಲು ಕ್ರಮ ಜರುಗಿಸುವಂತೆ ಸೂಚನೆ ನೀಡಲು ಸಹ ಕೋರಿದೆ.

ಈ ಸುತ್ತೋಲೆಯು ಕಂದಾಯ ಇಲಾಖೆಯ ವೆಬ್ ಸೈಟ್ www.revdept.kar.nic.in ನಲ್ಲಿ ಸಹ ದೊರೆಯುತ್ತದೆ.

(ರಾಜೀವ್ ಚಾವ್ಲಾ)
ಸರ್ಕಾರದ ವಿಶೇಷ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಿ)

ಗೆ,

ಎಲ್ಲಾ ಜಿಲ್ಲಾಧಿಕಾರಿಗಳಿಗೆ

ಪ್ರತಿಯನ್ನು ಎಲ್ಲಾ ತಹಸೀಲ್ದಾರರಿಗೆ ಸೂಕ್ತ ಕ್ರಮಕ್ಕಾಗಿ ಕಳಿಸಿದೆ